# ಮುಖ್ಯ ಚುನಾವಣಾಧಿಕಾರಿಯವರ ಕಛೇರಿ, ಕರ್ನಾಟಕ

ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-560001.

---

ಸಂಖ್ಯೆ: ಸಿಆಸುಇ 136 ಚುಮಪ 2026 ದಿನಾಂಕ: 19-05-2026

**ಇವರಿಗೆ,**

1. ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಎನ್.ಆರ್.ವೃತ್ತ, ಬೆಂಗಳೂರು.
2. ಅಪರ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು
3. ರಾಜ್ಯದ ಎಲ್ಲಾ ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು.
4. ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಉತ್ತರ, ದಕ್ಷಿಣ, ಪೂರ್ವ ಪಶ್ಚಿಮ, ಮತ್ತು ಕೇಂದ್ರ)
5. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಹಾಗೂ ಸ್ವೀಪ್ ನೋಡಲ್ ಅಧಿಕಾರಿಗಳು

**ಮಾನ್ಯರೆ,**

ವಿಷಯ: ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ (Special Intensive Revision (SIR) ಪ್ರಯುಕ್ತ BLO Facilitation Centre ಹಾಗೂ Voter Facilitation Centre ಸ್ಥಾಪಿಸುವ ಕುರಿತು

**ಉಲ್ಲೇಖ:** 1. ಭಾರತ ಚುನಾವಣಾ ಆಯೋಗದ ಆದೇಶ ಸಂಖ್ಯೆ:23/ERS/2025 (vol II) ದಿನಾಂಕ: 24.06.2025.

2. ಭಾರತ ಚುನಾವಣಾ ಆಯೋಗದ ಅಧಿಸೂಚನೆ ಸಂಖ್ಯೆ: 23/2025-ಇಆರ್‌ಎಸ್ (VOL-II) ದಿನಾಂಕ: 14.05.2026

3. ಈ ಕಛೇರಿಯ ಸಮ ಸಂಖ್ಯೆ ಪತ್ರ ದಿನಾಂಕ: 26.09.2025

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (2) ರ ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ರಾಜ್ಯದಲ್ಲಿ "ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ" Special Intensive Revision (SIR) ಕಾರ್ಯದ ಅಧಿಸೂಚನೆ ಹೊರಡಿಸಲಾಗಿದ್ದು, ಸದರಿ ಪರಿಷ್ಕರಣೆ ಕಾರ್ಯದಲ್ಲಿ ಮತದಾರರು ಸುಗಮವಾಗಿ ಭಾಗವಹಿಸಲು ಸಾಧ್ಯವಾಗುವಂತೆ BLO Facilitation Centre ಗಳನ್ನು ಹಾಗೂ Voter Facilitation Centre ಗಳನ್ನು ಸ್ಥಾಪಿಸುವ ಕುರಿತಂತೆ ನಿರ್ದೇಶನವಿರುತ್ತದೆ. ಅದರನ್ವಯ ಈ ಕೆಳಕಂಡಂತೆ ಕ್ರಮವಹಿಸುವುದು.

1. BLO Facilitation Centre ಗಳನ್ನು ತಾಂತ್ರಿಕ ಸಹಾಯ ಬಯಸುವ BLO ಗಳಿಗೆ ಅಗತ್ಯ ದಾಖಲೆಗಳನ್ನು ಅಪ್‌ಲೋಡ್ ಮಾಡಲು ತಾಂತ್ರಿಕ ನೆರವನ್ನು ಒದಗಿಸುವುದು.

ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯವನ್ನು ಗ್ರಾಮ ಆಡಳಿತಾಧಿಕಾರಿ ಕಚೇರಿ / ಪಂಚಾಯತ್ ಕಟ್ಟಡಗಳು (PDO ಕಛೇರಿ) / ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ವಿವಿಧ ಯೋಜನೆಗಳ ಅಡಿಯಲ್ಲಿ ಅನುದಾನ ಪಡೆದು ನಿರ್ಮಿಸಿರುವ ಸಮುದಾಯ ಭವನಗಳು / ನಗರ ಪ್ರದೇಶಗಳಲ್ಲಿ ವಾರ್ಡ್ ಕಚೇರಿಗಳು / ಮುಖ್ಯ ಪೌರಾಯುಕ್ತರ ಕಚೇರಿಗಳು / ತಾಲ್ಲೂಕು ಕೇಂದ್ರದಲ್ಲಿ ತಾಲ್ಲೂಕು ಕಚೇರಿ (ತಹಶೀಲ್ದಾರರ ಕಚೇರಿ)/Grama One (ಗ್ರಾಮಒನ್)/ ನಾಡ ಕಚೇರಿಗಳಲ್ಲಿ BLO Facilitation Centre ಳನ್ನು ಸ್ಥಾಪಿಸಿಕೊಳ್ಳುವುದು. ನಗರ

ಪ್ರದೇಶಗಳಲ್ಲಿ ಪ್ರತ್ಯೇಕವಾಗಿ ವಾರ್ಡ್ ವಾರು ಕೇಂದ್ರಗಳನ್ನು ಕಡ್ಡಾಯವಾಗಿ ಸ್ಥಾಪಿಸಿಕೊಳ್ಳುವುದು. (BLO Facilitation Centre ಗಳ ಮೇಲ್ವಿಚಾರಣೆಯನ್ನು BLO Supervisor ಗಳುಹೊಂದಿರುತ್ತಾರೆ)

ಹಾಗೂ

2. Voter Facilitation Centre ಗಳನ್ನು ಮತದಾರರಿಗೆ ಸುಲಭವಾಗಿ ಹಾಗೂ ಸಾಧ್ಯವಾಗಿರುವಂತಹ ಸಂಬಂಧಪಟ್ಟ ಮತಗಟ್ಟೆಗಳಲ್ಲಿ ಸ್ಥಾಪಿಸಿ, ಮತದಾರರಿಗೆ ಸಹಾಯವಾಗುವಂತೆ ವ್ಯವಸ್ಥೆ ಮಾಡುವುದು ಮತ್ತು ಅಗತ್ಯವಿರುವ ಸ್ಥಳಗಳಾದ ತಾಂಡಗಳು, ಪುನರ್ವಸತಿ ಕೇಂದ್ರಗಳಲ್ಲಿ ವಿಶೇಷ ಕ್ಯಾಂಪ್‌ಗಳನ್ನು ನಿಗಧಿತ ದಿನಾಂಕಗಳಲ್ಲಿ ನಡೆಸುವುದು. (Voter Facilitation Centre ಗಳ ಮೇಲ್ವಿಚಾರಣೆಯನ್ನು BLO ಗಳು ಹೊಂದಿರುತ್ತಾರೆ)

ಮುಂದುವರೆದು, ಸದರಿ ಕೇಂದ್ರಗಳಲ್ಲಿ ಸಾರ್ವಜನಿಕರ ಸಹಾಯಕ್ಕಾಗಿ ಕಛೇರಿಗಳಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ದತ್ತಾಂಶ ನಮೂದು ಸಹಾಯಕರನ್ನು (ಡೇಟಾ ಎಂಟ್ರಿ ಆಪರೇಟರ್) ಗಳನ್ನು ನಿಯೋಜಿಸಿಕೊಳ್ಳುವುದು.

ಮುಂದುವರೆದು, ಈ ಸೆಂಟರ್‌ಗಳಲ್ಲಿ ಮೇಲ್ಕಂಡ ಕಛೇರಿಗಳಲ್ಲಿ ಈಗಾಗಲೇ ಲಭ್ಯವಿರುವ ಕಂಪ್ಯೂಟರ್‌ಗಳು / ವೈ-ಫೈ / ಇನ್ನಿತರ ಅಗತ್ಯ ಮೂಲಭೂತ ಸೌಕರ್ಯಗಳನ್ನು ಉಪಯೋಗಿಸತಕ್ಕದ್ದು ಹಾಗೂ ಮತದಾರರಿಗೆ ಅನುಕೂಲವಾಗುವಂತೆ ತಮ್ಮಲ್ಲಿ ಲಭ್ಯವಿರುವ ಅಗತ್ಯ ಮೂಲಭೂತ ಸೌಕರ್ಯಗಳಾದ (ಆಸನದ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯದ ವ್ಯವಸ್ಥೆ ಹಾಗೂ, ಪಾರ್ಕಿಂಗ್ ವ್ಯವಸ್ಥೆಗಳನ್ನು) ಮತದಾರರು ಉಪಯೋಗಿಸಿಕೊಳ್ಳುವಂತೆ ವ್ಯವಸ್ಥೆ ಮಾಡುವುದು.

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ, ವಯೋವೃದ್ಧರು ಅನಾರೋಗ್ಯದಿಂದ ಬಳಲುತ್ತಿರುವವರು, ವಿಶೇಷ ಚೇತನರು, ಬಡವರು ಹಾಗೂ ದುರ್ಬಲರಿಗೆ ವಿಶೇಷ ಪರಿಷ್ಕರಣೆ ಕಾರ್ಯದಲ್ಲಿ ಭಾಗವಹಿಸಲು ಸುಲಭವಾಗುವಂತೆ ಸ್ವಯಂ ಸೇವಕರನ್ನು ನಿಯೋಜಿಸಿಕೊಳ್ಳುವುದು. (ಎನ್‌ಸಿಸಿ, ಎನ್‌ಎಸ್‌ಎಸ್ ಮತ್ತುಎನ್‌ವೈಕೆಎಸ್)

ಮೇಲ್ಕಂಡ ಅಂಶಗಳಿಗೆ ಸಂಬಂಧಿಸಿದಂತೆ, ಅಗತ್ಯ ಕ್ರಮಗಳನ್ನು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಕೈಗೊಂಡು, ಇದರೊಂದಿಗೆ ಲಗತ್ತಿಸಿರುವ ನಿಗಧಿತ ನಮೂನೆಯಲ್ಲಿ ಮಾಹಿತಿಯನ್ನು ಈ ಕಛೇರಿಗೆ ದಿನಾಂಕ: 22.05.2026 ರೊಳಗಾಗಿ ತಪ್ಪದೇ ಕಳುಹಿಸುವಂತೆ ತಮ್ಮನ್ನು ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

S. [signature]

(ಯೋಗೇಶ್ವರ.ಎಸ್)
ಜಂಟಿ ಮುಖ್ಯ ಚುನಾವಣಾಧಿಕಾರಿ,
ಸಿ.ಆ.ಸು.ಇ.(ಚುನಾವಣೆಗಳು)

| BLO Facilitation Centre & Voter Facilitation Centre | | | | | | | | | | | | | |
|---|---|---|---|---|---|---|---|---|---|---|---|---|---|
| Sl. No. | No. and Name of Assembly Constituency | BLO Facilitation Centre | | | | | | | | | | | |
| | | Part No and Name | Name of the BLO Facilitation Centre and Address | Link of the Location (Google Location) | Photo | BLO Supervisor (Incharge Official) | | Facilities | | | | | |
| | | | | | | Name | Contact No. | Wifi | Seating Arrangements | Drinking Water | Parking | Toilet | |

0

| Voter Facilitation Centre | | | | | | | | | | Volunteers | | |
|---|---|---|---|---|---|---|---|---|---|---|---|---|
| Part No and Name | Name of the Voter Facilitation Centre and Address | Link of the Location (Google Location) | Photo | BLO | | Facilities | | | | Name | Contact No. | Organization (NCC, NSS & NYKS) |
| | | | | Name | Contact No. | Seating Arrangements | Drinking Water | Parking | Toilet | | | |